ತಲೆಗೆ ಸುತ್ತಿದ್ದ ಟವಲ್ಲು ಬಿಚ್ಚಿ ಕೈಗಳನ್ನು ಒರೆಸಿಕೊಳ್ಳುತ್ತ ಬಂದ ತಿಮ್ಮರಾಯಿ, ಚೇರ್ಮನ್ನರು ಕೇಳುವ ಮೊದಲೇ, 'ಮೀಸೆ ರಾಮಣ್ಣಾರ ಸಂಬಳದಾಳು ಯಂಕಟಿ, ಗುಡ್ಡದಳ್ಳಿಗೆ ಅಂತ ಸೈಕಲ್ ಮೇಲೆ ಹೋಗ್ತಿದ್‌ನಂತೆ. ಏರಿ ಮೇಲೆ ನಿಂತು ನೀರು ನೋಡ್ತಿದ್ದಾಗ ಕೆರೇಲಿ ಹೆಣ ತೇಲ್ತಿರೋದು ಕಾಣಿಸಿತಂತೆ... ಹಂಗೇ ಹಿಂದಕ್ ಬಂದ್ನಂತೆ. ಇಷ್ಟೇ ಅವನು ಹೇಳಿದ್ದು' ಅನ್ನುತ್ತ ಚೇರ್ಮನ್ನರ ಮುಖ ನೋಡಿದ.

ಮೂವತ್ತೈದು ವರ್ಷದ ತಿಮ್ಮರಾಯಿ ಸುಳ್ಳು ಹೇಳೋನಲ್ಲ. ಹತ್ತನ್ನೆರಡು ವರ್ಷಗಳಿಂದ ಅವನು ಚೇರ್ಮನ್ನರ ಮನೆಯಲ್ಲಿ ಸಂಬಳಕ್ಕಿದ್ದಾನೆ. ಅವರೂ ಅವನನ್ನು ಮನೆಯ ಮಗನಂತೆ ಕಾಣುತ್ತಾರೆ. ಚೇರ್ಮನ್ನರನ್ನು ಅವನು ಅಣ್ಣಯ್ಯ ಅಂತಲೇ ಕರೀತಾನೆ. ತಿಮ್ಮರಾಯಿ ಕೇಳಿಸಿಕೊಂಡಿದ್ದು ಸರಿ ಇರಬೌದು. ಆದ್ರೆ ಯಂಕಟಿ ಹೇಳಿದ್ರಲ್ಲಿ ಸುಳ್ಳಿರಬೌದಲ್ಲ ಅಂತ ಅವರಿಗೆ ಆ ಕ್ಷಣಕ್ಕೆ ಅನ್ನಿಸಿತು. 'ಸಟ್ಟನೆ ಹೋಗಿ ಆ ಯಂಕಟೀನ ಕರಕಂಡ್ ಬಾ... ಹಂಗೇ ರಾಜಣ್ಣನ ಮನೆಗೋಗಿ ಏನೇ ಮಾಡ್ತಿದ್ದರೂ ಬಿಟ್ಟು ಬರಬೇಕಂತೆ ಅಂತ ಹೇಳು. ಆ ಮೇಲೆ ಪಿಡಿಒ ಮನೆಗೂ ಹೋಗಿ ಅವನನ್ನ ಕರೆದು ಬಾ' ಎಂದರು.

ಹತ್ತೇ ನಿಮಿಷದಲ್ಲಿ ಯಂಕಟಿ ಬಂದ. 'ನಂಗೇನೂ ಗೊತ್ತಿಲ್ಲ ಚೇರ್ಮನ್ನರೇ. ಗುಡ್ಡದಳ್ಳಿಗೆ ಅಂತ ಸೈಕಲ್ ಮೇಲೆ ಹೋಗ್ತಿದ್ದೆ. ಕೆರೆ ತುಂಬಿ ಮೊರೀತಾ ಇತ್ತು... ನೋಡನ ಅಂತ ಸೈಕಲ್ಲಿಂದ ಇಳಿದು ಏರಿ ಮೇಲೆ ಹತ್ತಿ ನಿಂತ್ಕಂಡು ನೋಡ್ತಿದ್ದೆ. ಕೆರೆ ಮಧ್ಯದಲ್ಲಿ ಯಣಗಳು ತೇಲ್ತ ಇರೋದು ಕಾಣ್ತು... ಹೆಂಗಸಿನ ಯಣ! ಜತೆಗೆ ಒಂದು ಮಗೀನ ಯಣಾನೂ ಇದ್ದಂಗಿತ್ತು. ದೊಡ್ ಮೈಕಟ್ಟಿನ ಹೆಂಗ್ಸು... ಅಷ್ಟು ದೊಡ್ಡ ಹೆಂಗ್ಸು ನಮ್ಮೂರಲ್ಲಿ ಯಾರೂ ಇಲ್ಲ... ನಂಗೆ ಕೈಕಾಲೇ ಆಡಲಿಲ್ಲ. ಹಂಗೇ ಹಿಂದಕ್ ಬಂದು ಬಿಟ್ಟೆ. ಎದುರಿಗೆ ತಿಮ್ಮರಾಯಿ ಸಿಕ್ದ. ಅವನಿಗೆ ಈ ವಿಷ್ಯ ಹೇಳ್ದೆ...'

'ರಾಮಣ್ಣಾರು ಗುಡ್ಡದಳ್ಳಿಗೆ ಹೋಗಲಿಲ್ಲವೇನೊ' ಅಂತ ಕೇಳಿದ್ದಕ್ಕೆ, 'ಎದುರಿಗೆ ಶ್ಯಾನುಭೋಗರು ಬಂದರು. ಶಕುನ ಸರಿಯಾಗಲಿಲ್ಲ ಅಂತ ಹಿಂದಕ್‌ಬಂದೆ ಅಂತ ಸುಳ್ಳು ಹೇಳ್ದೆ' ಎನ್ನುತ್ತ ಚೇರ್ಮನ್ನರ ಮುಖ ನೋಡಿದ.

'ಯಣ ಮೊದ್ಲು ನೋಡಿದ್ದು ನಾನು ಅಮ್ತ ಪೊಲೀಸರಿಗೆ ಹೇಳಬ್ಯಾಡ್ರಿ, ನಿಮ್ಮ ದಮ್ಮಯ್ಯ...' ಎನ್ನುತ್ತ ಎರಡೂ ಕೈಗಳನ್ನು ಜೋಡಿಸಿ ಮುಗಿಯುತ್ತ ದೈನ್ಯದಿಂದ ಅವರ ಮುಖ ನೋಡಿದ. ಚೇರ್ಮನ್ನರಿಗೆ ಪಾಪ ಅನ್ನಿಸಿತು. ಅವನು ನಿಜವಾಗ್ಲೂ ಹೆದರಿದ್ದ. 'ಆಯ್ತು ಹೋಗು, ನೀನೂ ಯಾರಿಗೂ ಹೇಳಬ್ಯಾಡ' ಅಂದರು.

ಗೇಟಿನ ಕಡೆಗೆ ಹೋಗುತ್ತಿದ್ದ ಯಂಕಟಿಯನ್ನು ಮತ್ತೆ ಕರೆದರು. 'ನೀನು ಸರಿಯಾಗಿ ನೋಡಿದ್ಯೇನೊ... ಹೆಣ ಹೆಂಗಸಿಂದು ತಾನೆ? ಅವುದಪ್ಪ, ಮಕಾಡೆ ಬಿದ್ದಿತ್ತು. ಬಣ್ಣದ ಸೀರೆ ಉಟ್ಕಂಡಿದ್ದ ಹೆಂಗ್ಸು. ಮಗೀನ ಯಣಾನೂ ಪಕ್ಕದಲ್ಲೇ ಇತ್ತು. ಕೆರೆ ತುಂಬಿ ತುಳುಕಾಡ್ತ ಐತೆ. ಅವು ಕೆರೆ ಮಧ್ಯ ಇರೋದೆಂಗೆ? ಅಲೆಗಳ ತಳ್ಳಾಟಕ್ಕೆ ದಂಡೆಗೆ ಬರದೇ ಅಲ್ಲೇ ಇರೋದು ಹೆಂಗೆ ಅಂಬದು ನಂಗೆ ಗೊತ್ತಾಗಲಿಲ್ಲ' ಅನ್ನುತ್ತ ಅವರ ಮುಖ ನೋಡಿದ. ಹೋಗು ಎನ್ನುವಂತೆ ಚೇರ್ಮನ್ನರು ಸನ್ನೆ ಮಾಡಿದರು. ಯಂಕಟಿ ಹೋದ. ಮತ್ತೊಂದು ಹೊಸ ರಗಳೆ ಶುರುವಾಯ್ತು ಅಂತ ಚೇರ್ಮನ್ನರಿಗೆ ಅನ್ನಿಸಿತು. ಮೊದಲೇ ಊರು ಕೆಟ್ಟು ಕೆರ ಹಿಡಿದಿದೆ. ಊರಿಗೆ ಇರೋದು ಈ ಕೆರೆಯೊಂದೆ ಜಲಮೂಲ. ಮಳೆಗಾಲ ಮುಗೀತಾ ಬಂದಿರೊ ಹೊತ್ತಲ್ಲಿ ಅಲ್ಲಿ ಹೆಣ ಬೀಳ್ತವೆ ಅಂದ್ರೇನು? ಹೆಣಗಳು ತಾಯಿ ಮಗುವಿನದಿರಬೌದೇ? ಮೊದಲೇ ಕೆಟ್ಟ ಕಾಲ. ಹೆಣಗಳಿಗೆ ಕೊರೊನಾ, ಗಿರೋನ ಇದ್ದರೆ ಏನ್ಗತಿ? ನೀರ್‌ನ ಹಂಗೆ ಕುಡಿಯಕೂ ಆಗಲ್ಲ. ಅಷ್ಟು ನೀರು ಚೆಲ್ಲಕೂ ಆಗಲ್ಲ... ಚೆಲ್ಲಿದರೆ, ಮುಂದಿನ ಮಳೆಗಾಲದ ತನಕ ಜನ, ದನಕರಗಳ ಗತಿ ಏನು?